## 2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.

**ದಿಃ 16.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ಈ ಪ್ರಕರಣದಲ್ಲಿ ನನಗೆ ಸಾಕ್ಷಿ ನುಡಿಯಲು ನನಗೆ ನ್ಯಾಯಾಲದಿಂದ ಸಮನ್ಸ ಬಂದಿತ್ತು ಆದರೆ ನಾನು ಹೊರಗಡೆ ಇದ್ದ ಕಾರಣ ಅದನ್ನು ಪಡೆದುಕೊಂಡಿಲ್ಲ. ನಾನು ನ್ಯಾಯಾಲಯದಿಂದ ಯಾವುದೇ ಸಮನ್ಸ ಪಡೆದು ಅದಕ್ಕೆ ಸಹಿ ಮಾಡಿ ಕೊಟ್ಟಿಲ್ಲ. ಈ ದಾವೆಯಲ್ಲಿ ಸಾಕ್ಷಿ ನುಡಿಯಲು ನನ್ನನ್ನು ಯಾರೂ ಸಹ ಕರೆದುಕೊಂಡು ಬಂದಿಲ್ಲ ನ್ಯಾಯಾಲಯದಿಂದ ಮೇಸೇಜ್ ಬಂದಿತ್ತು ಹಾಗಾಗಿ ಬಂದಿರುತ್ತೇನೆ. ಸಾಕ್ಷಿ ಪುನಃ ನನಗೆ ನ್ಯಾಯಾಲಯದಿಂದ ಯಾವುದೇ ಸಮನ್ಸ ಬಂದಿಲ್ಲ ನಮ್ಮ ಮನೆಯವರು ಹೇಳಿದ ಮೇರೆಗೆ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ನ್ಯಾಯಾಲಯದ ಮೂಲಕ ಕಳುಹಿಸಿದ ಯಾವುದೇ ಸಮನ್ಸ ಪ್ರತಿ ನನ್ನ ಹತ್ತಿರ ಇರುವುದಿಲ್ಲ.

2. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರ ತಯಾರಿಸಲು ನಾನೇ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ವಾದಿ ಯಾವ ಕಾರಣಕ್ಕಾಗಿ ಪ್ರತಿವಾದಿಗಳ ವಿರುದ್ಧ ಈ ದಾವೆ ಸಲ್ಲಿಸಿರುತ್ತಾರೆಂದು ನನಗೆ ಗೊತ್ತು. ನಾನು ಖರೀದಿ ಪತ್ರ ಅಥವಾ ಯಾವುದೇ ಒಂದು ದಾಖಲೆಗೆ ಸಹಿ ಮಾಡಿರುತ್ತೇನೆ. ಅದರಲ್ಲಿ ಒಂದು ಖರೀದಿ ಕರಾರುಪತ್ರ ಇತ್ತು ಅದರಲ್ಲಿ ನಾನು ಸಹಿ ಮಾಡಿರುತ್ತೇನೆ. ಯಾವ ಅಸ್ತಿಯ ವಿಷಯವಾಗಿ ಸದರಿ ಖರೀದಿ ಕರಾರುಪತ್ರ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ ಅದರೆ ರುದ್ರಗಿರಿಜಾ ಅಪಾರ್ಟಮೆಂಟ್ ಎಂದು ಮಾತ್ರ ಗೊತ್ತು. 2016 ರಲ್ಲಿ ಖರೀದಿ ಪತ್ರ ಆಗಿರಬಹುದು. ನನಗೆ ದಿನಾಂಕ ಗೊತ್ತಿಲ್ಲ. ಇನ್ನೊಂದು

ದಾಖಲೆಗೆ ನವೆಂಬರ್ 2018 ರಲ್ಲಿ ಸಹಿ ಮಾಡಿರಬಹುದು. ನಾನು ಒಂದು ದಾಖಲೆಗೆ ನ್ಯಾಯಾಲಯದಲ್ಲಿ ಸಹಿ ಮಾಡಿರುತ್ತೇನೆ ಮತ್ತು ಇನ್ನೊಂದು ದಾಖಲೆಗೆ ಉಪ ನೊಂದಣಾಧಿಕಾರಿ ಕಚೇರಿಯಲ್ಲಿ ಸಹಿ ಮಾಡಿರುತ್ತೇನೆ. ನಾನು ಹೇಳುತ್ತಿರುವ ದಾಖಲೆ ಒಂದು 2016 ರಲ್ಲಿ ಆಗಿದೆ ಮತ್ತು ಇನ್ನೊಂದು ದಾಖಲೆ 2018 ರಲ್ಲಿ ಆಗಿದೆ. ನಿಪಿ.1 ದಾಖಲೆ ಮೇಲೆ ವಾದಿಯ ಸಹಿ ಇಲ್ಲ ಎಂದರೆ ಸಾಕ್ಷಿ ಅದು ಯಾವ ದಾಖಲೆ ಹಾಗೂ ಅದರ ಮೇಲೆ ಯಾರ ಸಹಿ ಇವೆ ಎಂದು ಗೊತ್ತಿಲ್ಲ ಆದರೆ ನನ್ನ ಸಹಿ ಮಾತ್ರ ಇದೆ. ಸದರಿ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತು. ಸದರಿ ದಾಖಲೆ ತಯಾರಿಸಲು ಎಲ್ಲಿ ಬಾಂಡ್ ಖರೀದಿಸಿರುತ್ತಾರೆ ಹಾಗೂ ಅದನ್ನು ಎಲ್ಲಿ ಹಾಗೂ ಯಾರು ತಯಾರಿಸಿದರು ಮತ್ತು ಅದನ್ನು ತಯಾರಿಸಲು ಯಾರು ಮಾಹಿತಿ ಕೊಟ್ಟರು ಹಾಗೂ ಯಾರು ಯಾರು ಸಹಿ ಮಾಡಿದರು ಎಂದು ಸಹ ನನಗೆ ಗೊತ್ತಿಲ್ಲ. ನನಗೆ ಸಹಿ ಮಾಡು ಎಂದು ಹೇಳಿದರು ನಾನು ಸಹಿ ಮಾಡಿರುತ್ತೇನೆ. rules, regulations and undertaking and conditions ಗಳನ್ನು ವಾದಿ ಹಾಕಿದ್ದರು. ಅವುಗಳೇ ನಿಪಿ.1 ರಲ್ಲಿ ಒಳಗೊಂಡಿವೆ ಹಾಗಾಗಿ ನಾನು ನಿಪಿ.1 ಕ್ಕೆ ಸಹಿ ಮಾಡಿರುತ್ತೇನೆ. ನಿಪಿ.1 ದಾಖಲೆ ಪ್ರಕಾರ ವಾದಿ terms and conditions ಹಾಕಿದ ದಾಖಲೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು undertaking ಆಗಿದೆ ಹಾಗೂ ಎಲ್ಲ ಗ್ರಾಹಕರು ಬರೆದುಕೊಡುವ ಹಾಗೆ ನಾನು ಸಹ ಬರೆದುಕೊಟ್ಟಿದ್ದೇನೆ. ನಾನು ಹೇಳುತ್ತಿರುವ ವಿಷಯಗಳನ್ನು ಹೊರತುಪಡಿಸಿ ಸದರಿ ದಾಖಲೆಯಲ್ಲಿ ಬೇರೆ ವಿಷಯ ಇಲ್ಲ ಎಂದರೆ ಸಾಕ್ಷಿ ಅದರಲ್ಲಿ maintenance ಬಗ್ಗೆ ಇದೆ ಹಾಗೂ ಸದರಿ ಅವಧಿಯಲ್ಲಿ ತುಂಬಲಿಲ್ಲವಾದರೆ ಅದರ ಮೇಲೆ ಬಡ್ಡಿ ಆಕರಿಸಬಹುದು ಎಂದು ಬರೆದಿದೆ ಎಂದು ನುಡಿಯುತ್ತಾರೆ. ನಿಪಿ.1 ದಾಖಲೆಯಾದ ಬಗ್ಗೆ ವಾದಿ ಪ್ರತಿವಾದಿಗೆ ಮಾಡಿಕೊಟ್ಟ ಖರೀದಿ

ಪತ್ರದಲ್ಲಿ ಉಲ್ಲೇಖ ಇದೆ. ಸಾಕ್ಷಿ ಮುಂದುವರೆದು ನಿಪಿ.1 ದಾಖಲೆ ಬಗ್ಗೆ ಅಲ್ಲ ಆದರೆ maintenance ಬಗ್ಗೆ ನಮೂದು ಇದೆ ಎಂದು ನುಡಿಯುತ್ತಾರೆ. ನಿಪಿ.1 ದಾಖಲೆಗೆ ನ್ಯಾಯಾಲಯದ ಹತ್ತಿರವೇ ಸಹಿ ಮಾಡಿರುತ್ತೇನೆ ಆದರೆ ನನಗೆ ಈಗ ನೆನಪಿಗೆ ಬರುತ್ತಿಲ್ಲ. ಸದರಿ ದಾಖಲೆಗೆ ಸಾಕ್ಷಿಯೆಂದು ಬೇರೆ ಯಾರು ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ವಾದಿಗೆ ಅನುಕೂಲವಾಗಲಿ ಎಂದು ಅವರು ನನ್ನ ಸಾಕ್ಷಿಯನ್ನು ಈ ದಾವೆಯಲ್ಲಿ ಮಾಡಿಸಿರುತ್ತಾರೆಂದರೆ ಸರಿಯಲ್ಲ. ಹಾಗಿದ್ದರೆ ಯಾವ ಕಾರಣಕ್ಕಾಗಿ ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ವಾದಿಯ ದಾವೆಯನ್ನು ಡಿಕ್ರಿ ಮಾಡಿ ಎಂದು ಕೇಳಿಕೊಂಡಿದ್ದಿರಿ ಎಂದರೆ ಸಾಕ್ಷಿ ವಾದಿ ತಪ್ಪು ಏನು ಕೇಳುತ್ತಿಲ್ಲ ಸರಿಯಾದದ್ದನ್ನೇ ಕೇಳುತ್ತಿದ್ದಾರೆ ಹಾಗಾಗಿ ಆ ರೀತಿ ನಮೂದಿಸಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಸಾಕ್ಷಿಯಾಗಿ ಮಾತ್ರ ಸಾಕ್ಷಿ ನುಡಿಯಲು ಬಂದ ಕಾರಣ ವಾದಿ ಪರವಾಗಿ ದಾವೆ ಡಿಕ್ರಿ ಮಾಡಿ ಎಂದು ನಿಮಗೆ ಹೇಳಲು ಬರುವುದಿಲ್ಲ ಎಂದರೆ ಸಾಕ್ಷಿ ನಾನು ಸಹ ವಾದಿಯ ಗ್ರಾಹಕ ಆಗಿದ್ದೇನೆ ಹಾಗೂ ಅವರ ಬಗ್ಗೆ ಒಳ್ಳೆಯ ಅಭಿಪ್ರಾಯ ಇದ್ದ ಕಾರಣ ಆ ರೀತಿ ಹೇಳುತ್ತಿದ್ದೇನೆ ಹಾಗಾಗಿ ಯಾರ ಪರವಾಗಿ ಅಥವಾ ವಿರುದ್ಧವಾಗಿ ಹೇಳುತ್ತಿಲ್ಲ. ನಾನು ವಾದಿಯ ಗ್ರಾಹಕನಾದ ಕಾರಣ ಅವರಿಗೆ ಅನುಕೂಲವಾಗಲಿ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಂಗತಿಗಳನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**